## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ .

## ಸಿಸಿ ನಂ.17/2025

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ.

**-:: ವಿರುದ್ದ ::-**

**ಆರೋಪಿತರುಃ**

1. ಉಮೇಶ ತಂದೆ ಚಂದ್ರಕಾಂತ ಚಿಕ್ಕಮಣ್ಣೂರ,
31 ವರ್ಷ, ಉಃ ಒಕ್ಕಲುತನ,

2. ವಾಲ್ಮೀಕಿ ತಂದೆ ಶೀಲವಂತ ಚಿಕ್ಕಮಣ್ಣೂರ,
33 ವರ್ಷ, ಉಃ ಒಕ್ಕಲುತನ,

3. ಪ್ರಕಾಶ ತಂದೆ ಬಸಣ್ಣ ಚಿಕ್ಕಮಣ್ಣೂರ,
29 ವರ್ಷ, ಉಃ ಒಕ್ಕಲುತನ,

4. ಮಂಜುನಾಥ ತಂದೆ ಸೂರ್ಯಕಾಂತ ಚಿಕ್ಕಮಣ್ಣೂರ,
25 ವರ್ಷ, ಉಃ ಒಕ್ಕಲುತನ,

5. ದತ್ತಾ ತಂದೆ ಸುರೇಶ ಚಿಕ್ಕಮಣ್ಣೂರ,
25 ವರ್ಷ, ಉಃ ಒಕ್ಕಲುತನ,

6. ವಿಶ್ವನಾಥ ತಂದೆ ಪರಮೇಶ್ವರ ಚಿಕ್ಕಮಣ್ಣೂರ,
20 ವರ್ಷ, ಉಃ ಒಕ್ಕಲುತನ,

7. ಮಹಾದೇವ ತಂದೆ ಗಣಪತಿ ಚಿಕ್ಕಮಣ್ಣೂರ,
29 ವರ್ಷ, ಉಃ ಒಕ್ಕಲುತನ,

8. ಸುನೀಲ ತಂದೆ ರಾಜಶೇಖರ ಜಮಾದಾರ,
28 ವರ್ಷ, ಉಃ ಒಕ್ಕಲುತನ,

ಎಲ್ಲರೂ ವಾಸಃ ಮಣ್ಣೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ಅಫಜಲಪೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಣ್ಣೂರ ಗ್ರಾಮದ ಬಾಬಾ ನಗರದಲ್ಲಿ 1ನೇ ಆರೋಪಿತನ ಮನೆ ಹಾಗೂ ಫಿರ್ಯಾದಿ ಚಾಸಾ-1 ಶ್ರೀಮತಿ ಪ್ರೇಮಾ ರವರ ಮನೆಗಳು ಹತ್ತಿರ ಇದ್ದು, ಈಗ್ಗೆ 2-3 ತಿಂಗಳಿಂದ ಚಾಸಾ-1 ಶ್ರೀಮತಿ ಪ್ರೇಮಾ ರವರು ನೀರಿಗೆ ಹೋದಾಗ, ಗುಡಿಗೆ ಹೋದಾಗ ಮತ್ತು ಅಂಗಡಿಗಳಿಗೆ ಹೋದಾಗ, 1ನೇ ಆರೋಪಿತನಾದ ನೀವು ಫಿರ್ಯಾದಿ ಚಾಸಾ-1 ಶ್ರೀಮತಿ ಪ್ರೇಮಾ ರವರನ್ನು ಕೆಟ್ಟ ದೃಷ್ಟಿಯಿಂದ ನೋಡುವುದು ಹಾಗೂ ಅಶ್ಲೀಲ ಹಾಡುಗಳನ್ನು ಹಾಡುವುದು ಮತ್ತು ಚಾಸಾ-1 ರವರನ್ನು ಹಿಂಬಾಲಿಸುವದು ಮಾಡುತ್ತಿದ್ದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 354(ಡಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಇಂದು ದಿನಾಂಕಃ 02.10.2023 ರಂದು ಮಧ್ಯಾಹ್ನ 03-00 ಗಂಟೆ ಸಮಯದಲ್ಲಿ ಫಿರ್ಯಾದಿ ಚಾಸಾ-1 ಶ್ರೀಮತಿ ಪ್ರೇಮಾ ರವರು ಎಮ್ಮೆ ಮೇಯಿಸಲು ಅಂತಾ ತಮ್ಮ ಮನೆಯಿಂದ ಎಮ್ಮೆ ಹೊಡೆದುಕೊಂಡು ಹೋಗಿ ಇಮಾಮಸಾಬ ಗೌರ ಇವರ ನಡುವಿನ ಬಂದಾರಿ ಹತ್ತಿರ ಎಮ್ಮೆ ಮೇಯಿಸುತ್ತಿರುವಾಗ 1ನೇ ಆರೋಪಿತನಾದ ನೀವು ಫಿರ್ಯಾದಿ ಚಾಸಾ-1 ಶ್ರೀಮತಿ ಪ್ರೇಮಾ ರವರಿಗೆ ಅತ್ಯಾಚಾರವೆಸಗುವ ಉದ್ದೇಶನಿಂದ ಕೈಹಿಡಿದು ತೆಕ್ಕೆಗೆ ಬಿದ್ದು ಜಗ್ಗಾಡುತ್ತಾ ತನ್ನ ಸಂಗಡ ಬಾಜು ಇರುವ ಇಮಾಮಸಾಬ ಇವರ ಹೊಲದಲ್ಲಿರುವ ಕಬ್ಬಿನಲ್ಲಿ ಬರುವಂತೆ ತಿಳಿಸಿದ್ದು ಆಗ ಸದರಿಯವಳು ನಿರಾಕರಿಸಿ ಆತನಿಗೆ ಈ ತರಹ ಮಾಡುವದು ಸರಿ ಅಲ್ಲ ಅಂತ ಹೇಳಿದ್ದಕ್ಕೆ, ಸದರಿ 1ನೇ ಆರೋಪಿತನು ಚಾಸಾ-1 ರವರಿಗೆ ರಂಡಿ ಮುಂಡಿ ಅಂತಾ ಬೈದು ಸೀರೆ ಸೆರಗು ಹಿಡಿದು ಜಗ್ಗಿ ಅಪರಾಧಿಕ ಬಲಪ್ರಯೋಗ ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 354(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಾಯಂಕಾಲ 04-30 ಗಂಟೆ ಸುಮಾರಿಗೆ 1 ರಿಂದ 8ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಚಾಸಾ-1 ರವರ ಮನೆಯ ಮುಂದೆ ಬಂದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆ ಮೂಲಕ ಭಾ.ದಂ.ಸಂ.147 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಕೈಯಲ್ಲಿ ಸನಿಕೆ, ಕಟ್ಟಿಗೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದಿದ್ದು, ಆ ಮೂಲಕ ಭಾ.ದಂ.ಸಂ.148 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಏ ರಂಡಿ ಮಕ್ಕಳ್ಯಾ ನಿಮಗೆ ಸೊಕ್ಕ ಬಾಳ ಬಂದಾದ ಇವತ್ ಒಂದ್ ಕೈ ನೋಡ್ತೇವೆ ನಿಮಗೆ ಜೀವ ಸಹಿತ ಬಿಡುವದಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಸ್ಥಳದಲ್ಲಿ ಅವಮಾನ ಪಡಿಸಿದ್ದು, ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರನ್ನು ಉದ್ರೇಕಿಸಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

7. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 4, 5 ಮತ್ತು 8ನೇ ಆರೋಪಿತರಾದ ನೀವು ಚಾಸಾ-8 ಮಾರುತಿ ರವರಿಗೆ ಕೈಯಿಂದ ಎಳೆದಾಡಿ ನಿಮ್ಮಲ್ಲಿ 8ನೇ ಆರೋಪಿತನಾದ ನೀವು ಒಂದು ಸನಿಕೆಯಿಂದ ಚಾಸಾ-8 ರವರ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು, 4ನೇ ಆರೋಪಿತನಾದ ನೀವು ಒಂದು ಕಟ್ಟಿಗೆಯಿಂದ ಚಾಸಾ-8 ರವರ ಬಲ ತೊಡೆಗೆ ಹೊಡೆದು ಗುಪ್ತಗಾಯಪಡಿಸಿದ್ದು, 5ನೇ ಆರೋಪಿತನಾದ ನೀವು ಒಂದು ಹಿಡಿ ಗಾತ್ರದ ಕಲ್ಲಿನಿಂದ ಚಾಸಾ-8 ರವರ ಎಡಚೆಪ್ಪೆಗೆ ಹೊಡೆದು ಸಾಮಾನ್ಯ ಸ್ವರೂಪದ ಗುಪ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

8. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4, ಚಾಸಾ-6 ಮತ್ತು 7 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಆಗ ಜಗಳ ಬಿಡಿಸಲು ಬಂದ ಚಾಸಾ-1 ಮತ್ತು 4 ರವರಿಗೆ ನಿಮ್ಮಲ್ಲಿ 1ನೇ ಆರೋಪಿತನಾದ ನೀವು ಚಾಸಾ-1 ರವರ ಸೀರೆ ಸೆರಗು ಹಿಡಿದು ಜಗ್ಗಾಡಿ ಕೈಯಿಂದ ಗುದ್ದಿ, ಚಾಸಾ-6 ವಾಸುದೇವ ರವರಿಗೆ 2ನೇ ಆರೋಪಿತನಾದ ನೀವು ಕಾಲಿನಿಂದ ಬೆನ್ನ ಮೇಲೆ ಒದ್ದು, 7ನೇ ಆರೋಪಿತನಾದ ನೀವು ಚಾಸಾ-9 ನಾರಾಯಣ ರವರಿಗೆ ಕೈಯಿಂದ ಬೆನ್ನು ಮತ್ತು ಹೊಟ್ಟೆಯ ಮೇಲೆ ಗುದ್ದಿ ಸಾಮಾನ್ಯ ಸವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ. 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

9. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಈ ಘಟನೆಯನ್ನು ಚಾಸಾ-10 ಮತ್ತು 11 ರವರು ನೋಡಿ ಜಗಳ ಬಿಡಿಸಿ ಕಳುಹಿಸುತ್ತಿರುವಾಗ 1 ರಿಂದ 8ನೇ ಆರೋಪಿತರೆಲ್ಲರೂ ಕೂಡಿ ಇನ್ ಮುಂದ್ ಊರಾಗ ಹೆಂಗ ಸಂಸಾರ ಮಾಡ್ತಿರಿ ನೋಡ್ತಿವಿ ಅಂತಾ ಜೀವ ಭಯ ಹಾಕಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

## ಆರೋಪಿತರ ಹೇಳಿಕೆ

ಪ್ರ:-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉ: ಆ-1

ಆ-2

ಆ-3

ಆ-4

ಆ-5

ಆ-6

ಆ-7

ಆ-8

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

ಆ-3

ಆ-4

ಆ-5

ಆ-6

ಆ-7

ಆ-8

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 06.03.2026 ಪ್ರ.ದ.ನ್ಯಾ.ದಂ. ಅಫಜಲಪೂರ.